**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 31/2024**

**ಚಾ.ಸಾಃ 20, ಪ್ರಾ.ಸಾಃ 6**

| | |
|---|---|
| ಸಾಕ್ಷಿದಾರನ ಹೆಸರು | ಸುರೇಶ ಕುಂಬಾರ್ |
| ತಂದೆಯ ಹೆಸರು | ಗಂಗಪ್ಪ ಕುಂಬಾರ್ |
| ವಯಸ್ಸು | 46 ವರ್ಷ |
| ಉದ್ಯೋಗ | ಸಿಪಿಐ, ರೈಲ್ವೇಸ್, ಹುಬ್ಬಳ್ಳಿ |
| ವಾಸ್ತವ್ಯ | ಹುಬ್ಬಳ್ಳಿ |

**ಸಾಕ್ಷಿಯನ್ನು ದಿನಾಂಕಃ 06-06-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 08-02-2024 ರಿಂದ 29-06-2024 ರವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08-02-2024 ರಂದು ಈ ಕೇಸಿನ ಕಡತವನ್ನು ಚಾಸಾ-19 ರಿಂದ ಪಡೆದುಕೊಂಡಿರುತ್ತೇನೆ.

ದಿನಾಂಕ 15-03-2024 ರಂದು ಪ್ರಕರಣದ ಗಾಯಾಳುಗಳಾದ ಚಾಸಾ-6 ಮತ್ತು ಇತರೇ ಇಬ್ಬರ ಗಾಯದ ಪ್ರಮಾಣಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-16 ರಿಂದ 18 ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದು ಆರೋಪಿ ವಿರುದ್ಧ ಅದೇ ದಿನ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಕಡತವನ್ನು ಪಡೆದುಕೊಂಡ ನಂತರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ನಿಪಿ-3 ರ ರೀತ್ಯಾ ಅಪಘಾತ ಸ್ಥಳವು ಕುಮಟಾ ಹೊನ್ನಾವರ ರಸ್ತೆಯ ಬಲಭಾಗದಲ್ಲಿ ಆಗಿದೆ ಎಂದರೆ ಸರಿ. ಸಾಮಾನ್ಯವಾಗಿ ದ್ವಿಚಕ್ರ ವಾಹನಗಳು ರಾಷ್ಟ್ರೀಯ ಹೆದ್ದಾರಿಯ ಎಡಬದಿಯ ರಸ್ತೆಯಲ್ಲಿ ಚಲಾಯಿಸಬೇಕು. ಆದರೆ ಜನರು ರಾಷ್ಟ್ರೀಯ ಹೆದ್ದಾರಿ ಏಕ ಮುಖ ಸಂಚಾರ ಇರುವುದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಎರಡೂ ರಸ್ತೆಗಳಲ್ಲಿ ಹೋಗುತ್ತಾರೆ. ಬಲಬದಿಯ ರಸ್ತೆ ಖಾಲಿ ಇದ್ದರೆ ಬೈಕ್ ಸವಾರರು ಅಲ್ಲಿಯೂ ಸಹ ಹೋಗಬಹುದು. ನಾನು ಸಾಕ್ಷಿದಾರರ ಹೇಳಿಕೆಯನ್ನು ಪರಿಶೀಲಿಸಿದ್ದೇನೆ. ಪರಿಶೀಲಿಸುವ ಕಾಲಕ್ಕೆ ಸಾಕ್ಷಿದಾರರು ಬೈಕ್ ಸವಾರ ಯಾವುದಾದರೂ ವಾಹನವನ್ನು ಓವರ್ ಟೇಕ್ ಮಾಡಿ ಬಂದಿದ್ದಾರೆ ಎಂಬುದಾಗಿ ಸಾಕ್ಷಿದಾರರು ಯಾರೂ ಹೇಳಿಲ್ಲ.

ಪ್ರಶ್ನೆಃ ನಿಮ್ಮ ಪ್ರಕಾರ ಬೈಕ್ ಸವಾರ ರಾಷ್ಟ್ರೀಯ ಹೆದ್ದಾರಿಯ ಬಲಬದಿಯಲ್ಲಿ ನೇರವಾಗಿ ಬಂದು ಕಾರಿಗೆ ಡಿಕ್ಕಿಪಡಿಸಿದ್ದಾರಾ?

ಈ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿದಾರರಲ್ಲದೇ ಇರುವುದರಿಂದ ಮತ್ತು ಯಾವುದೇ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಯನ್ನು ದಾಖಲುಮಾಡಿಕೊಳ್ಳದೇ ಇರುವುದರಿಂದ ಸದರಿ ಪ್ರಶ್ನೆಯನ್ನು ತಿರಸ್ಕರಿಸಲಾಯಿತು.

ನನ್ನ ತನಿಖೆಯಲ್ಲಿ ಆರೋಪಿಯ ಕಾರು ರಾಷ್ಟ್ರೀಯ ಹೆದ್ದಾರಿಯ ಮಧ್ಯದ ಡಿವೈಡರನಲ್ಲಿ ನಿಲ್ಲಿಸಿಕೊಂಡಿದ್ದು ಬೈಕ್ ಸವಾರ ನೇರವಾಗಿ ಬಂದು ನಿಂತಿದ್ದ ಕಾರಿಗೆ ಡಿಕ್ಕಿಪಡಿಸಿದ್ದು ಕಂಡುಬಂದಿದ್ದರೂ ಸಹ ಉದ್ದೇಶಪೂರ್ವಕವಾಗಿ ಕಾರು ಚಾಲಕನ ಯಾವುದೇ ತಪ್ಪು ಇಲ್ಲದೇ ಇದ್ದರೂ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**